4780(5669) **ಶ್ರೀ ಬಸವರಾಜು ಹೆಚ್.ಡಿ.(ವಿರಾಜಪೇಟೆ)**:–ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಗೆ ಅರಣ್ಯ ಇಲಾಖೆಯಿಂದ ವಿದ್ಯುತ್ ಬೇಲಿ ನಿರ್ಮಾಣಕ್ಕಾಗಿ ಬಿಡುಗಡೆಯಾಗಿರುವ ಹಣ ಎಷ್ಟು; ಈ ಪೈಕಿ ವೆಚ್ಚ ಮಾಡಿರುವ ಹಣ ಎಷ್ಟು; (ವರ್ಷಾವಾರು ಕಳೆದ 3 ವರ್ಷಗಳ ವಿವರ ನೀಡುವುದು);

ಆ) ಜಿಲ್ಲೆಯ ಯಾವ ಯಾವ ಪ್ರದೇಶಗಳಲ್ಲಿ ವಿದ್ಯುತ್ ಬೇಲಿ ನಿರ್ಮಾಣ ಮಾಡಲಾಗಿದೆ; (ತಾಲ್ಲೂಕುವಾರು ಮಾಹಿತಿ ನೀಡುವುದು);

ಇ) ಬೇಲಿ ನಿರ್ಮಿಸುವಾಗ ಗಿರಿಜನ ಕುಟುಂಬಗಳನ್ನು ಒಳಗೊಂಡಂತೆ ಬೇಲಿ ನಿರ್ಮಿಸಲಾಗುವುದೇ ಅಥವಾ ಬಿಟ್ಟು ಬೇಲಿ ನಿರ್ಮಿಸಲಾಗುವುದೇ? (ವಿವರ ನೀಡುವುದು);

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ(ಅರಣ್ಯ,ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):–

ಅ)ಕೊಡಗು ಜಿಲ್ಲೆಯಲ್ಲಿ ಸೌರಶಕ್ತಿ ವಿದ್ಯುತ್ ಬೇಲಿ ನಿರ್ಮಿಸಲು ಕಳೆದ ಮೂರು ವರ್ಷಗಳಲ್ಲಿ ಅನುದಾನ ಹಾಗೂ ವೆಚ್ಚದ ವಿವರ ಕೆಳಕಂಡಂತಿದೆ;–

ವರ್ಷ	ಅನುದಾನ	ವೆಚ್ಚ
2002–03	49.094	49.075
2003–04	34.186	33.921
2004–05	25.110	25.110
ಒಟ್ಟು	108.390	108.106

ಆ) ಕೊಡಗು ಜಿಲ್ಲೆಯ ವಿರಾಜಪೇಟೆ ಹಾಗೂ ಸೋಮವಾರಪೇಟೆ ತಾಲ್ಲೂಕಿನಲ್ಲಿ ಕಳೆದ ಮೂರು ವರ್ಷಗಳಲ್ಲಿ ಸೌರಶಕ್ತಿ ವಿದ್ಯುತ್ ಬೇಲಿ ನಿರ್ಮಾಣ ಮಾಡಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಗಿರಿಜನ ಕುಟುಂಬಗಳನ್ನೊಳಗೊಂಡಂತೆ ಸೌರಶಕ್ತಿ ವಿದ್ಯುತ್ ಬೇಲಿಯನ್ನು ನಿರ್ಮಾಣ ಮಾಡಲಾಗಿದೆ. ಇದರಿಂದ ಗಿರಿಜನರ ಚಲನವಲನಕ್ಕೆ ಯಾವುದೇ ರೀತಿಯ ಧಕ್ಕೆ ಉಂಟಾಗುವುದಿಲ್ಲ.

ಅನುಬಂಧ – 1

5669

ತಾಲ್ಲೂಕು	ಸ್ಥಳ		ಸೌರಶಕ್ತಿ ವಿದ್ಯುತ್ ಬೇಲಿ (ಕಿ.ಮೀ.ಗಳಲ್ಲಿ)
ವಿರಾಜಪೇಟೆ	1	ಅಳಲೂರು –ಕೆ.ಜಿ.ಹಟ್ಟಿಕೊಪ್ಪ	16
	2	ಮರಪಾಲ–ಬೋಬುಕಾಡು	4
	3	ಶಿನೂರು ಜೈನ್ ಗೇಟ್–ಕಾರ್ಮಾಡು ಗೇಟ್	7.36
	4	ಕರ್ಮಾಡು ಗೇಟ್ ನಿಂದ ಕಲಕ್ಷಮ ತೀರ್ಥ ನದಿ	8
	5	ಮಹಿಮಕಟ್ಟೆಯ ಹಳ್ಳಿ –ಕಟ್ಟೆಪಾಳ್ಯದ ಕೇರಳಗಡಿವರೆಗೆ	10.15
	6	ತಿತಿಮತಿ ವಲಯದಿಂದ ಚನ್ನಂಗಿ ತಾವರೆಗೆ ವರೆಗೆ	3
	7	ಮಾವಿನಹಳ್ಳ ಸೇತುವೆಯಿಂದ ಘಟ್ಟದ ಹಳ್ಳ ಅರಣ್ಯ ಇಲಾಖೆ ವಸತಿ ಗೃಹದವರೆಗೆ	2
	8	ಮಲ್ಲಾರೆ ಕಲ್ಲಹಳ್ಳಿ ನೀರು ಟ್ಯಾಂಕ್‌ನಿಂದ ಮಾವಿನಹಳ್ಳಿ ಸೇತುವೆ ವರೆಗೆ	2
	9	ಮಾಲ್ಲಾರೆ ತನಿಖಾ ಠಾಣೆಯಿಂದ ಕಲ್ಲಾಳ ನೀರು ಟ್ಯಾಂಕಿನವರೆಗೆ	2
	10	ಕಡತಿಕೆರೆ ಜಂಕ್ಷನ್ ನಿಂದ ಮಲ್ಲಾರೆ ಅರಣ್ಯ ತನಿಖಾ ಠಾಣೆವರೆಗೆ	1
	11	ಕಡತಿಕೆರೆ ಜಂಕ್ಷನ್ ನಿಂದ ದಿಡ್ಡಳ್ಳಿ ಮರಪಾಲರವರೆಗೆ ಮಾಲ್ಲಾರೆ ಅರಣ್ಯ ತನಿಖಾ ಠಾಣೆವರೆಗೆ	2
	12	ದಿಡ್ಡಳ್ಳಿ ಮರಪಾಲದಿಂದ ಬಸವನಳ್ಳಿ ಅಣೆಕೆರೆ ರಸ್ತೆವರೆಗೆ	2

	13	ಬಸವನಳ್ಳಿ ಅಣೆಕೆರೆ ರಸ್ತೆಯಿಂದ ಸಿಪಿಟಿ 17ರ ವರೆಗೆ	2
	14	ಚನ್ನಂಗಿ ಶಾಖೆಯಿಂದ ಅರಣ್ಯ ಮತ್ತು ಗ್ರಾಮ ಸಭೆಯವರೆಗೆ	2.55
	15	ಬದ್ರಗೋಳ ಗ್ರಾಮದ 3ನೇ ಮರಪಾಲ ದಿಂದ ಸಿಪಿಟಿ. 18ರ ಗಡಿಯವರೆಗೆ	2
	16	3ನೇ ಮರಪಾಲದಿಂದ ಸಿಪಿಟಿ 18ರ ಗಡಿಯವರೆಗೆ	2
	17	1ನೇ ಮರಪಾಲದಿಂದ ಬಾಳುಮಾನಿ ತೋಟದವರೆಗೆ	1
	18	ಕರಡಿಗೋಡು ಗ್ರಾಮದ ಕಾವೇರಿ ನದಿ ದಡದ ಬುವನಹಳ್ಳಿ ತೋಟದಿಂದ ಅವರೆ ಗುಂಡ ರಸ್ತೆವರೆಗೆ	2
	19	ಅವರೆಗುಂಡ ರಸ್ತೆಯಿಂದ ಸಿಲ್ವ ತೋಟದ ವರೆಗೆ	2
	20	ಸಿಲ್ವತೋಟದಿಂದ ಘಟ್ಟದ ಹಳ್ಳ ಅರಣ್ಯ ವಸತಿ ಗೃಹದವರೆಗೆ	2
	21	ಅಬ್ಬೂರು ಟಾಟಾ ಕಾಫಿತೋಟದ ಮೂಲೆಯಿಂದ ಕೆಲಿ ಮುಟ್ಟು ಮಾದಪ್ಪನವರ ಜಾಗ	2
	22	ತಿತಿಮತಿ ವಲಯದ ಕೆಸುವಿನ ಕೆರೆಯಿಂದ ಕೋಟೆಮಟ್ಟಿ ಹಳೆ ಸೌರಹರ್ತಿಬೇಲಿವರೆಗೆ	2
	23	ತಿತಿಮತಿ ಅರಣ್ಯ ವಿಶ್ರಾಂತಿ ಗೃಹದಿಂದ ಬಂಬುಕಾಡು ಮೂಲಕಮಲ್ವಿ ಪಟ್ಟಣದವರೆಗೆ	2.8
	24	ಜಂಗಡಿಯಿಂದ ಚೀಣಿ ಹಚ್ಚುವರೆಗೆ	2

	25	ಚೀಣಿ ಹಚ್ಚುವಿನಿಂದ ಮರಪಾಲದವರೆಗೆ	2
ಸೋಮವಾರಪೇಟೆ	26	ಆಡಿನಾಡೂರಿನಿಂದ ಯಲಕನೂರು	2.5
	27	ಏತನೀರಾವರಿಯಿಂದ ಕಕ್ಕೆ ಹೊಳೆವರೆಗೆ	5
	28	ಯಲಕನೂರಿನಿಂದ ಸೀಗೆ ಹೊಸೂರು	2.5
	29	ಕೊಡೂರು ಬೆಟ್ಟಹಳ್ಳಿಯಿಂದ ಪಾಲೂರು	3
	30	ಪಾಲೂರಿನಿಂದ ನಂಜರಾಯಪಟ್ಟಣ	4
	31	ನಂಜರಾಯ ಪಟ್ಟಣದಿಂದ ಹೊಸಪಟ್ಟಣ	3
	32	ಹೊಸಪಟ್ಟಣದಿಂದ ರಂಗಸಮುದ್ರ	3.8
		ಒಟ್ಟು	109.66

4781(5670) **ಶ್ರೀ ಬಸವರಾಜು ಹೆಚ್.ಡಿ. (ವಿರಾಜಪೇಟೆ):** ಮಾನ್ಯ ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರವಾಸೋದ್ಯಮ ಇಲಾಖೆ ವತಿಯಿಂದ ವಿರಾಜಪೇಟೆ ವಿಧಾನಸಭೆ ಕ್ಷೇತ್ರದ ವ್ಯಾಪ್ತಿಯಲ್ಲಿ ಅಭಿವೃದ್ಧಿ ಪಡಿಸಲು ಗುರುತಿಸಿರುವ ಸ್ಥಳಗಳು ಯಾವುವು;

ಆ) ಇದಕ್ಕಾಗಿ ಬಿಡುಗಡೆ ಮಾಡಿರುವ ಹಾಗೂ ವೆಚ್ಚ ಮಾಡಿರುವ ಹಣ ಎಷ್ಟು;

ಇ) ನಾಗರಹೊಳೆಯನ್ನು ಪ್ರವಾಸೋದ್ಯಮ ಇಲಾಖೆಯಿಂದ ಅಭಿವೃದ್ಧಿಪಡಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳಾವುವು;

ಶ್ರೀ ಡಿ.ಟಿ.ಜಯಕುಮಾರ್ (ಪ್ರವಾಸೋದ್ಯಮ ಸಚಿವರು);

ಅ) ವಿರಾಜಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಅಭಿವೃದ್ಧಿಪಡಿಸಲು ಪ್ರಾವಾಸೋದ್ಯಮ ಇಲಾಖೆಯಿಂದ ನಾಗರಹೊಳೆ, ಇರ್ಪು ಮತ್ತು ಬಿಟ್ಟಂಗಾಲಗಳನ್ನು ಗುರುತಿಸಲಾಗಿದೆ.